

‘ಸುಪ್ವಾ’ದ ವೈಶಿಷ್ಟ್ಯ ಪ್ರತಿಬಿಂಬಿಸುವಂತಿರುವ ಒಂದು ಅಂದ ಚೆಂದದ ಕಟ್ಟಡ

**ಹರಿಯಾಣದ ಪ್ರದರ್ಶಕ ಕಲೆಗಳ ವಿವಿ**

# ಸುಪ್ವಾ! ಕಟ್ಟಡವೇ ಕಣ್ಣಿಗೆ ಹಬ್ಬ! ಕಲಾತ್ಮಕ ಅಭಿವ್ಯಕ್ತಿ, ಅಬ್ಬಬ್ಬಾ...

**ಹರಿಯಾಣದ ‘ಸುಪ್ವಾ’ ವಿಶ್ವವಿದ್ಯಾಲಯ ಪ್ರದರ್ಶಕ ಕಲೆಗಳ ಅಧ್ಯಯನಕ್ಕೆ ದೇಶದಲ್ಲೇ ಮಾದರಿಯಾದುದು. ಸರ್ಕಾರಿ ಸಂಸ್ಥೆಯೊಂದು ಸೃಜನಶೀಲವಾಗಿ ಹಾಗೂ ಕಲಾತ್ಮಕ ಚೌಕಟ್ಟಿನಲ್ಲಿ ಹೇಗೆ ರೂಪುಗೊಳ್ಳುವುದು ಎನ್ನುವುದಕ್ಕೆ ‘ಸುಪ್ವಾ’ ಅತ್ಯುತ್ತಮ ಉದಾಹರಣೆ.**

**■ ನಿರಂಜನ ವಾನಳ್ಳಿ**



ವಿ.ವಿ. ಆವರಣದ ಹೊಳಪು ಹೆಚ್ಚಿಸಿರುವ ಒಂದು ಸೃಜನಶೀಲ ವಿನ್ಯಾಸ

ಹರಿಯಾಣ ರಾಜ್ಯದ ರೋಹ್ಟಕ್ ಒಂದು ಜಿಲ್ಲಾ ಕೇಂದ್ರ. ನವದೆಹಲಿಯಿಂದ ಎರಡು ಗಂಟೆ ಪ್ರಯಾಣದ ಊರು. ಜಾಟ್ ಜನಾಂಗದ ಮುಖ್ಯಕೇಂದ್ರವೆಂದು ಕರೆಸಿಕೊಳ್ಳುವ ರೋಹ್ಟಕ್‌ನಲ್ಲಿ ನೋಡುವಂತಹದ್ದು ಏನಿದೆಯೆಂದು ಕೇಳಿದಾಗ, ಎಲ್ಲರೂ ದಾರಿ ತೋರಿದ್ದು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದತ್ತ. ಸರ್ಕಾರಿ ಸಂಸ್ಥೆಯೊಂದರ ಬಗ್ಗೆ ಬಂದ ಅಪರೂಪದ ಧನಾತ್ಮಕ ಟಿಪ್ಪಣಿಯಿದು!

2014ರಲ್ಲಿ ಆರಂಭಗೊಂಡ ಈ ವಿ.ವಿ. ‘ಫಿಲ್ಮ್ ಅಂಡ್ ಟಿವಿ’, ‘ಡಿಸೈನ್’, ‘ಚಿತ್ರಕಲೆ’, ‘ನಗರ ಯೋಜನೆ ಮತ್ತು ವಾಸ್ತುಶಿಲ್ಪ’ ಎಂಬ ನಾಲ್ಕು ಪ್ರತ್ಯೇಕ ಸಂಸ್ಥೆಗಳನ್ನು ಒಳಗೊಂಡಿದೆ. ಹತ್ತು ಎಕರೆ ಜಾಗದಲ್ಲಿ ತಲೆ ಎತ್ತಿರುವ ಪ್ರದರ್ಶಕ ಮತ್ತು ದೃಶ್ಯಕಲೆಗಳ ಈ ಸಮಾಗಮವು ಆಧುನಿಕ ವಾಸ್ತುಶಿಲ್ಪದ ಅಪರೂಪದ ಕಲಾಕೃತಿಯೆಂದು ಧಾರಾಳವಾಗಿ ಹೇಳಬಹುದು.

ಈ ವಿಶ್ವವಿದ್ಯಾಲಯದ ಪೂರ್ಣ ಹೆಸರು